Form No.4 (Civil)
Deposition Sheets
(R.P.No.57)

# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಎಸ್.ಸಿ. ಸಂಖ್ಯೆಃ 32/2020

ಪ್ರಾ.ಸಾ. 3 ಚಾ.ಸಾ 9

| | | |
|---|---|---|
| ಹೆಸರು | : | ಭಾಗಪ್ಪ |
| ತಂದೆಯ ಹೆಸರು | : | ಯಲ್ಲಪ್ಪ |
| ವಯಸ್ಸು | : | 59 ವರ್ಷ |
| ಉದ್ಯೋಗ | : | ಸಮಾಜ ಸೇವೆ |
| ವಾಸ | : | ಅಂಬೇಡ್ಕರ ನಗರ, ಯಾದಗಿರಿ |

ಪ್ರಮಾಣ ವಚನ ಭೋಧಿಸಿದ ದಿನಾಂಕಃ 03-09-2025
ಮುಖ್ಯ ವಿಚಾರಣೆ ಸರಕಾರಿ ಅಭಿಯೋಜಕರಿಂದ

ನನಗೆ ಚಾಸಾ-1 ಹಾಗೂ ಮೃತ ಜಗನಾಥ ಹಾಗೂ ಆರೋಪಿತರ ಪರಿಚಯ ಇರುತ್ತದೆ. ಈ ಕೇಸಿನ ಬಗ್ಗೆ ನನಗೆ ಏನು ಮಾಹಿತಿ ಇರುವುದಿಲ್ಲ ಮತ್ತು ಪೊಲೀಸರಿಗೆ ಯಾವುದೇ ಹೇಳಿಕೆ ಹೇಳಿರುವುದಿಲ್ಲ. ನ್ಯಾಯಾಲಯದ ಮುಂದೆ ಇರುವ ಆರೋಪಿತರು ಜಗನಾಥನ ಕೊಲೆಗೆ ಕಾರಣ ಎನ್ನುವ ವಿಚಾರ ಗೊತ್ತಿಲ್ಲ.

**(ಈ ಸಂದರ್ಭದಲ್ಲಿ ಮಾನ್ಯ ಪಿಪಿರವರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಕೋರಿರುತ್ತಾರೆ, ಅನುಮತಿ ನೀಡಲಾಗಿದೆ.)**

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

1. ದಿಃ 24.02.2019 ರಂದು ಜಗನಾಥನ ತಮ್ಮ ಶ್ರಿಕಾಂತ ನನಗೆ ಪೋನ ಮಾಡಿ ಜಗನಾಥ ಎರಡು-ಮೂರು ದಿನಗಳಿಂದ ಮನೆಯಲ್ಲಿ ಇಲ್ಲ ಎಂದು ತಿಳಿಸಿದ್ದ ಎಂದರೆ ಸರಿಯಲ್ಲ. ನಮ್ಮ ನೆಟಪ್ಪರಿಗೆ ಕೇಳಿ ಪೋನ ಮಾಡಿ ಜಗನಾಥನ ಬಗ್ಗೆ ಕೇಳಿದ್ದೆ ಎಂದರೆ ಸರಿಯಲ್ಲ. ದಿಃ 03.03.2019 ರಂದು ಬೆಳಿಗ್ಗೆ ಚಾಸಾ-1 ಶ್ರೀಕಾಂತ ನನಗೆ ಪೋನ ಮಾಡಿ ಗುರುಮಠಕಲ್ ಪೋಲೀಸ ಠಾಣೆಗೆ ಹೋಗಿ ಬರೋಣ ಹಾಗೂ ಮಲ್ಲಿಕಾರ್ಜನ ಕ್ರಾಂತಿ ಹಾಗೂ ಅಶ್ವಿನಿ ನಾವೆಲ್ಲರೂ ಪೊಲೀಸ

ಠಾಣೆಗೆ ಬಂದು, ಠಾಣೆಯಲ್ಲಿ ದಸ್ತಿ, ಚಪ್ಪಲಿ ಹಾಗೂ ಫೋಟೋಗಳನ್ನು ನೋಡಿದ ನಂತರ ಆರೋಪಿ ಅಶ್ವಿನಿ ವಸ್ತುಗಳು ಎಲ್ಲ ನನ್ನ ಗಂಡನೆದ್ದು ಎಂದು ಅಳತೊಡಗಿದ್ದಳು ಎಂದರೆ ಸರಿಯಲ್ಲ. ನಂತರ ಜಗನಾಥನ ಹುತ್ತಿಟ್ಟ ಕುಣಿ ಮತ್ತು ಹೆಣ ಸಿಕ್ಕಿದ ಸ್ಥಳಕ್ಕೆ ಹೋಗಿದ್ದೆವು ಎಂದರೆ ಸರಿಯಲ್ಲ. ತದನಂತರ ದಿಃ 04.01.2020 ರಂದು ಸಾಯಂಕಾಲ ಶ್ರಿಕಾಂತ ಈತನು ನನಗೆ ಫೋನ ಮಾಡಿ ಆರೋಪಿ ಅಶ್ವಿನಿ ಹಾಗೂ ಇನ್ನೊಬ್ಬ ಆರೋಪಿ ಶಶಿಕುಮಾರ ಇಬ್ಬರೂ ಕೂಡಿ ತನ್ನಣ್ಣನವರ ಜಗನಾಥನಿಗೆ ದಿಃ 22.02.2019 ರಂದು ರಾತ್ರಿ ವೇಳೆ ಬಾಡಿಗೆ ಮನೆಯಲ್ಲಿ ಉಸಿರುಗಟ್ಟಿಸಿ ಸಾಯಿಸಿ ಹೆಣವನ್ನು ಗುರುಮಠಕಲ್ ಸಮೀಪ ಹೊಯ್ದು ಬಿಸಾಡಿರುತ್ತಾರೆ ಅಂತಾ ಆರೋಪಿತರಿಬ್ಬರು ಗುರುಮಠಕಲ್ ಪೊಲೀಸರ ಮುಂದೆ ಹೇಳುವಾಗ ಚಾಸಾ-1 ಶ್ರೀಕಾಂತ ತಾನು ಕೇಳಿರುವುದಾಗಿ ಹೇಳಿದರು ಎಂದರೆ ಸರಿಯಲ್ಲ. ಈಗ ವಿವರವಾಗಿ ಓದಿ ಹೇಳಿದಂತೆ ನಾನು ಪೊಲೀಸರ ಮುಂದೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು **ನಿ.ಪಿ.26** ಎಂದು ಗುರುತಿಸಲಾಯಿತು. ಮೃತ ಜಗನಾಥನ ಕೊಲೆಗೆ ನ್ಯಾಯಾಲಯದ ಮುಂದೆ ಇರುವ ಆರೋಪಿತರೇ ಕಾರಣ ಎಂದು ಸೂಚಿಸುವ ವಿಚಾರ ಸರಿಯಲ್ಲ.

2. ನನಗೆ ಎಲ್ಲಾ ವಿಷಯಗೊತ್ತಿದ್ದರು ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>1 ನೇ ಆರೋಪಿ ಪರ ಪಾಟೀ ಸವಾಲು ಶ್ರೀ.ಎಮ್.ಎಮ್.ಇ. ವಕೀಲರಿಂದ</u>

-ಇಲ್ಲವೆಂದು ನುಡಿಯುತ್ತಾರೆ.

<u>2 ನೇ ಆರೋಪಿ ಪರ ಪಾಟೀ ಸವಾಲು ಶ್ರೀ ಬಿ.ಬಿ.ಕೆ. ವಕೀಲರಿಂದ</u>

-ಇಲ್ಲವೆಂದು ನುಡಿಯುತ್ತಾರೆ.

<u>ಮರುವಿಚಾರಣೆಃ-ಇಲ್ಲ</u>

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಯಾದಗಿರಿ.